# ಜಿಲ್ಲಾಧಿಕಾರಿ ಹಾಗೂ ಜಿಲ್ಲಾದಂಡಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು ರವರ

## ನಡವಳಿಗಳು

ವಿಷಯ: ಕೋವಿಡ್-19 (ಕರೊನಾ ವೈರಾಣು ಕಾಯಿಲೆ-2019)ಯ ಸ್ಪೋಟ ಮತ್ತು ಹರಡುವುದನ್ನು ತಡೆಗಟ್ಟಲು ಸರ್ಕಾರದ ಆದೇಶದಂತೆ ಸಾರ್ವಜನಿಕರು ಕೆಲವು ವಿಶೇಷ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಡಿಡಿ/ಎಸ್ ಎಸ್ ಯು/ಕೋವಿಡ್-19/17/19-20, ದಿನಾಂಕ: 13.03.2020.

*****

ಪ್ರಸ್ತಾವನೆ:

ಉಲ್ಲೇಖದ ಸರ್ಕಾರದ ಆದೇಶದಂತೆ ಕೋವಿಡ್-19 (ಕರೊನಾ ವೈರಾಣು ಕಾಯಿಲೆ-2019)ಯ ಸ್ಪೋಟ ಮತ್ತು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ, ನಾಗರಹೊಳೆ ವ್ಯಾಪ್ತಿಯಲ್ಲಿನ ಪ್ರವಾಸಿಗರ ಪ್ರವೇಶ ಹಾಗೂ ಸಫಾರಿಗೆ ವಿದೇಶಿಯರು ಮತ್ತು ಸ್ಥಳೀಯ ಪ್ರವಾಸಿಗರು ಶಾಲಾ ಮಕ್ಕಳು ಹಾಗೂ ಇತರರು ಈ ತಾಣವನ್ನು ವೀಕ್ಷಿಸಲು ಆಗಮಿಸುವುದರಿಂದ ಸೊಂಕು ಹರಡುವ ಸಾಧ್ಯತೆಯಿರುವ ಕಾರಣ ಸರ್ಕಾರದ ಆದೇಶದಂತೆ ಸಾರ್ವಜನಿಕರ ಆರೋಗ್ಯದ ಹಿತ ದೃಷ್ಟಿಯಿಂದ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ನಾಗರಹೊಳೆ ವ್ಯಾಪ್ತಿಯಲ್ಲಿನ ಪ್ರವಾಸಿಗರ ಪ್ರವೇಶ ಹಾಗೂ ಸಫಾರಿಯನ್ನು ದಿನಾಂಕ: 16.03.2020 ರಿಂದ 23.03.2020 ರವರೆಗೆ ಪ್ರವೇಶವನ್ನು ರದ್ದುಗೊಳಿಸುವುದು ಅಗತ್ಯವೆಂದು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ದಿನಾಂಕ: 15-03-2020

MYSDC/MAG1/MLO/71(2)/2020(E-95753 )

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಅಭಿರಾಮ್ ಜಿ ಶಂಕರ್, ಭಾ.ಆ.ಸೇ. ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಯಾದ ನಾನು ಸಿ.ಆರ್.ಪಿ.ಸಿ ಸೆಕ್ಷನ್ 144(3)ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಕೋವಿಡ್-19 (ಕರೊನಾ ವೈರಾಣು ಕಾಯಿಲೆ-2019)ಯ ಸ್ಪೋಟ ಮತ್ತು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ ನಾಗರಹೊಳೆ ವ್ಯಾಪ್ತಿಯಲ್ಲಿನ ತಾಣವನ್ನು ವೀಕ್ಷಿಸಲು ಹಾಗೂ ಸಫಾರಿಗಾಗಿ ವಿದೇಶಿಯರು ಮತ್ತು ಸ್ಥಳೀಯ ಪ್ರವಾಸಿಗರು ಶಾಲಾ ಮಕ್ಕಳು ಹಾಗೂ ಇತರರು ಆಗಮಿಸುವುದರಿಂದ ಎಲ್ಲಾ ಪ್ರವಾಸಿಗರ ಪ್ರವೇಶ ಹಾಗೂ ಸಫಾರಿಯನ್ನು ದಿನಾಂಕ: 16.03.2020 ರಿಂದ 23.03.2020 ರವರೆಗೆ ಪ್ರವೇಶವನ್ನು ರದ್ದುಗೊಳಿಸಿ ಆದೇಶಿಸಿರುತ್ತೇನೆ. ಅವಶ್ಯಕವಿದ್ದಲ್ಲಿ ಪ್ರವೇಶದ ನಿರ್ಬಂಧವನ್ನು ವಿಸ್ತರಿಸಲಾಗುವುದು.

ಈ ಆದೇಶವನ್ನು ನನ್ನ ಸಹಿ ಮತ್ತು ಮೊಹರಿನೊಂದಿಗೆ ಈ ದಿನ ದಿನಾಂಕ: 15 03.2020 ರಂದು ಹೊರಡಿಸಿದೆ.

15/3/20

(ಅಭಿರಾಮ್ ಜಿ.ಶಂಕರ್)

ಜಿಲ್ಲಾಧಿಕಾರಿ, ಹಾಗೂ ಜಿಲ್ಲಾ ದಂಡಾಧಿಕಾರಿ,

ಮೈಸೂರು ಜಿಲ್ಲೆ, ಮೈಸೂರು

ಗೆ,

ಅರಣ್ಯ ಸಂರಕ್ಷಣಾಧಿಕಾರಿಗಳು,

ಹಾಗೂ ನಿರ್ದೇಶಕರು,

ರಾಜೀವ್ ಗಾಂಧಿ ರಾಷ್ಟ್ರೀಯ ಉದ್ಯಾನವನ

ಹುಣಸೂರು

ಪ್ರತಿಯನ್ನು: ತಹಶೀಲ್ದಾರ್, ಹುಣಸೂರು ತಾಲ್ಲೂಕು, ಹುಣಸೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.